**ದಿನಾಂಕಃ 27.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**6.** ಶುಭಲಾಲ್, ಶೃತಿ ಶುಭಲಾಲ್, ಶ್ರೇಯಸ್ ಶುಭಲಾಲ್ ಎಂಬುವವರ ವಿರುದ್ದ ನೀವು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೀರಿ ಎಂದರೆ ಸರಿ. ಮೇಲ್ಕಂಡವರು ಠಾಣೆಗೆ ಹಾಜರಾಗಿ ನಾವು ಮಂಜುನಾಥ್ ರವರ ಜೊತೆ ಮಾತನಾಡಿ ಸಮಸ್ಯೆ ಬಗೆಹರಿಸಿಕೊಳ್ಳುತ್ತೇವೆ ಎಂದು ಹೇಳಿ ಎನ್.ಸಿ.ಆರ್ ಪಡೆದುಕೊಂಡರು. ನಾನು ದೂರು ಕೊಟ್ಟ ನಂತರವೂ ಮೇಲ್ಕಂಡವರು ಠಾಣೆಗೆ ಹಾಜರಾಗದ ಕಾರಣ ನಾನು ಹೇಳಿದ ಕಾರಣ ಪೊಲೀಸರು ಎರಡು ದಿನಗಳ ನಂತರ ಎನ್.ಸಿ.ಆರ್ ಮಾಡಿದರು. ಎನ್.ಸಿ.ಆರ್ ಬಗ್ಗೆ ನಾನು ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ.

**7.** Innovation investment management Pvt. Ltd ನ Managing Director ಯಾರು ಎಂದರೆ ಸಾಕ್ಷಿಯು ಅದರ ನಿರ್ದಿಷ್ಟವಾದ ಮಾಹಿತಿ ನನಗೆ ನೀಡಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ನಾನೇ ದಾಖಲಿಸಿರುತ್ತೇನೆ. ಪಿರ್ಯಾದನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದೂರಿನ 3 ನೇ ಖಂಡಿಕೆಯಲ್ಲಿ the accused is working in Innovation investment management Pvt. Ltd represented by Managing Director Sri. Shubalal and Shruti Shubalal ಎಂದು ನಮೂದಿಸಿರುತ್ತಿರಿ ಎಂದರೆ ಸಾಕ್ಷಿಯು ಆ ರೀತಿ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಅದರ Managing Director ಯಾರು ಎಂದರೆ ಸಾಕ್ಷಿಯು ಅದರ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿ ತ್ಯಾಗರಾಜರವರ ವಿರುದ್ದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವುದಿಲ್ಲ. ಚೌರಿಯಪ್ಪ ಎಂಬುವವರ ವಿರುದ್ದ

ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೀರಾ ಎಂದರೆ ಸಾಕ್ಷಿಯು ತ್ಯಾಗರಾಜನ್ ರವರ ವಿರುದ್ದ ದೂರು ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ. ಚೌರಿಯಪ್ಪ ನವರ ವಿರುದ್ದ ದಾಖಲಿಸಿದ ದೂರಿನ ಜೊತೆಯಲ್ಲಿಯೇ ತ್ಯಾಗರಾಜನ್ ರವರ ವಿರುದ್ದ ನೀವು ದೂರು ದಾಖಲಿಸಿಲ್ಲ ಎಂದರೆ ಸರಿಯಲ್ಲ. ಜೆ.ಪಿ.ನಗರದ ಪೊಲೀಸ್ ಠಾಣೆಯಲ್ಲಿ ಒಟ್ಟು ಎರಡು ದೂರುಗಳನ್ನು ದಾಖಲಿಸಿದ್ದೆನು. ಚೌರಿಯಪ್ಪನವರ ವಿರುದ್ದ ದೂರು ದಾಖಲಿಸಿದ ನಂತರ ಆ ದೂರು ಏನಾಯಿತು ಎಂದರೆ ಸಾಕ್ಷಿಯು ಚೌರಿಯಪ್ಪನವರು ನೀವು ನನ್ನ ವಿರುದ್ದ ತಪ್ಪಾಗಿ ದೂರು ದಾಖಲಿಸಿರುತ್ತೀರಿ ತ್ಯಾಗರಾಜನ್ ಮುಖಾಂತರವೇ ನಿನಗೆ ಆದಂತಹ ಅನ್ಯಾಯವನ್ನು ಸರಿಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಅಶೋಕ್ ಚೌರಿಯಪ್ಪ ರವರ ವಿರುದ್ದ ನೀಡಿದ ದೂರು ಸಹ ಎನ್.ಸಿ.ಆರ್ ಆಗಿರುತ್ತದೆ. ಆ ಎನ್.ಸಿ.ಆರ್ ಅನ್ನು ನಾನು ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.